**ಓ ಎಸ್ ನಂಃ 1002/2014**
**ಡಿ ಡಬ್ಲ್ಯೂ ಃ 1**

**ದಿಃ 06.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್ ಯು ಐ ವಕೀಲರಿಂದಃ-**

ಅಸಲು ದಾವಾ ಸಂಖ್ಯೆ 30/2014 ವಜಾ ಆಗಿದೆ ಎಂದರೆ ಸಾಕ್ಷಿಯು ನಾವು ರಾಮನಗರದ ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲನ್ನು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 75/1998 ರಲ್ಲಿ ಆಗಿರುವ ರಾಜಿ ಡಿಕ್ರಿಯನ್ನು ವಾದಿಗಳಿಗೆ ಬಂಧನ ಅಲ್ಲ ಎಂದು ಕೋರಿ ವಾದಿ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಆ ದಾವೆಗೂ ಈ ದಾವೆಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 75/1998 ರಲ್ಲಿ ವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ನಮ್ಮ ಆಸ್ತಿಗೂ ಮತ್ತು ವಾದಿಗಳಿಗೂ ಸಂಬಂಧ ಇಲ್ಲದ ಕಾರಣ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅಸಲು ದಾವಾ ಸಂಖ್ಯೆ 75/1998 ರಲ್ಲಿ ಈ ದಾವೆಯ ಸ್ವತ್ತುಗಳನ್ನು ಸಹ ಸೇರಿಸಿದ್ದೀರಿ ಎಂದರೆ ಸಾಕ್ಷಿಯು ನಮ್ಮ ಸ್ವತ್ತುಗಳನ್ನು ಸೇರಿಸಿದ್ದೀವಿ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 75/1998 ರ ರಾಜಿ ಡಿಕ್ರಿಯನ್ನು ದಿಃ 04.08.2022 ರಲ್ಲಿ ತಿದ್ದುಪಡಿ ಮಾಡಲು ಅರ್ಜಿಯನ್ನು ಸಲ್ಲಿಸಿ ತಿದ್ದುಪಡಿ ಮಾಡಿದ್ದೀರಿ ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರಿದು ಚಕ್ಕುಬಂದಿಯನ್ನು ತಿದ್ದುಪಡಿ ಮಾಡಿದ್ದೇವೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು ಅದು ಅಸಲು ದಾವಾ ಸಂಖ್ಯೆ 75/1998 ರ ತಿದ್ದುಪಡಿ ರಾಜಿ ಅರ್ಜಿ ಆಗಿದ್ದು ಸಾಕ್ಷಿ ಸದರಿ ದಾಖಲಾತಿಯನ್ನು ಒಪ್ಪಿದ್ದು ಸದರಿ ದಾಖಾತಿಯನ್ನು **ನಿಪಿ 42** ಎಂದು ಗುರುತಿಸಲಾಯಿತು. ಅಸಲು ದಾವಾ ಸಂಖ್ಯೆ 30/2014 ರ ದಾವೆಯು ನಿಪಿ 42 ರ ರಾಜಿ ಅರ್ಜಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ಅಸಲು ದಾವಾ ಸಂಖ್ಯೆ 75/1998 ರ ದಾವೆಯ ರಾಜಿ ಅರ್ಜಿಯಲ್ಲಿ ಈ ದಾವೆಯ ಸ್ವತ್ತುಗಳನ್ನು ಸೇರಿಸಿ ರಾಜಿ ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ತಮಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದಿದ್ದರೂ ಸಹ ತಾವು ನಿಪಿ 42 ರ ಪ್ರಕಾರ ರಾಜಿ ತಿದ್ದುಪಡಿ ಮಾಡಲು ಅರ್ಜಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಯು. ಗುಜ್ಜಾರಯ್ಯರವರು ಅಸಲು ದಾವಾ ಸಂಖ್ಯೆ 74/1990 ರ ದಾವೆಯನ್ನು ತಮ್ಮ ವಿರುದ್ದ ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು ಅದು ಅಸಲು ದಾವಾ ಸಂಖ್ಯೆ 74/1990 ರ ವಾದ ಪತ್ರದ ದೃಢೀಕೃತ ನಕಲಾಗಿದ್ದು ಸಾಕ್ಷಿಯ ಒಪ್ಪಿಗೆಯ ಮೇರೆಗೆ ಸದರಿ ದಾಖಲೆಯನ್ನು **ನಿಪಿ 43** ಎಂದು ಗುರುತಿಸಲಾಯಿತು.

**ಓ ಎಸ್ ನಂಃ 1002/2014**
**ಡಿ ಡಬ್ಲ್ಯೂ ಃ 1**

ಅಸಲು ದಾವಾ ಸಂಖ್ಯೆ 74/1990 ರಲ್ಲಿ ದೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂ. 16/2 ರಲ್ಲಿ 20 ಗುಂಟೆ ಜಮೀನು ವಾದಿಯವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸರ್ವೆ ನಂ. 16/2 ರಲ್ಲಿ 20 ಗುಂಟೆ ಜಮೀನಿನ ಖಾತೆ ಮತ್ತು ಪಹಣಿ ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಸದರಿ ಜಮೀನು ನಮಗೆ ಸೇರಿದ್ದು ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 74/1990 ರ ದಾವೆಯನ್ನು ತಾವು ಮತ್ತು ಯು. ಗುಜ್ಜಾರಯ್ಯರವರು ಸೇರಿ ರಾಜಿ ಮಾಡಿಕೊಂಡಿದ್ದೀರಿ ಎಂದರೆ ಸರಿ. ಸದರಿ ದಾವೆಯ ಎಲ್ಲಾ ವಿಚಾರಗಳು ನನಗೆ ಗೊತ್ತು. ಸದರಿ ದಾವೆಯಲ್ಲಿ ಈ ದಾವೆಯ ವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ವಾದಿಗಳಿಗೆ ಅಸಲು ದಾವಾ ಸಂಖ್ಯೆ 74/1990 ರ ಷೆಡ್ಯೂಲ್ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 16/18 ಹನುಮಂತಯ್ಯ ಮತ್ತು ನಾಗರಾಜು ರವರ ಹೆಸರಿನಲ್ಲಿ ಪಹಣಿ ಪತ್ರಿಕೆಯಲ್ಲಿ ಬರುತ್ತಿದೆ ಎಂದರೆ ಸಾಕ್ಷಿ ಈಗ ಅವರು ಖಾತೆಯನ್ನು ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 16/18 ರ 20 ಗುಂಟೆ ಜಮೀನು ಮುಲತಃ ಗಾಳಹನುಮಯ್ಯನವರ ಮಗ ಚಿಕ್ಕನರಸಯ್ಯನವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಞ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**